## ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ

## ನ್ಯಾಯಾಲಯ, ಆಲೂರು.

**ಸಿ.ಸಿ.ಸಂಖ್ಯೆಃ 413/22**

| | | |
|---|---|---|
| ಸಾಕ್ಷಿದಾರರ ಹೆಸರು | ಅಶೋಕ | ಸಿ.ಡಬ್ಲ್ಯೂಃ 5 |
| ಗಂಡನ / ತಂದೆ ಹೆಸರು | ಈರತ್ತೇಗೌಡ | ಪಿ.ಡಬ್ಲ್ಯೂಃ 2 |
| ವಯಸ್ಸು | 38 ವರ್ಷ | |
| ಉದ್ಯೋಗ | ಚಾಲಕ | |
| ವಾಸಸ್ಥಳ | ಹುಣಸವಳ್ಳಿ | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 28.11.2025

**ಮುಖ್ಯ ವಿಚಾರಣೆಃ ಸಸಅ ರಿಂದ**

ಚಾಸಾ 4 ರವರ ಪರಿಚಯ ಇರುತ್ತದೆ. ಅವರು ಈಗ ಮರಣ ಹೊಂದಿರುತ್ತಾರೆ. ನಿಪಿ 2 ಮತ್ತು 3 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2ಬಿ ಮತ್ತು 3ಬಿ ಎಂದು ಗುರುತಿಸಲಾಯಿತು. ನಿಪಿ 2 ಮತ್ತು 3 ರಲ್ಲಿ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆಯಲಾಗಿದೆ ಗೊತ್ತಿರುವುದಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಆರೋಪಿಯನ್ನು ನೋಡಿ ಗುರುತಿಸಲಾಗುವುದಿಲ್ಲ.

(ಈ ಸಂದರ್ಭದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು

ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅರವರಿಂದಃ

ದಿ.23.05.22 ರಂದು ಸಂಜೆ 5 ಕ್ಕೆ ನನ್ನನ್ನು ಮತ್ತು ಚಾಸಾ 4 ರವರನ್ನು ಪೊಲೀಸರು ಬರಮಾಡಿಕೊಂಡು ಕಾರ್ಜುವಳ್ಳಿ ಗ್ರಾಮಕ್ಕೆ ತೆರಳಿ ನೋಡಿದಾಗ ಅಂಗಡಿಯ ಮುಂಭಾಗದಲ್ಲಿ ಒಬ್ಬ ವ್ಯಕ್ತಿಯು ಬಿಳಿ ಚೀಲ ಹಿಡಿದುಕೊಂಡು ನಿಂತಿದ್ದು ಪೊಲೀಸರನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ಆತನನ್ನು ಹಿಡಿದು ವಿಚಾರಿಸಿದಾಗ ಆತನ ಹೆಸರು ನಂದೀಶ್ ಉಃ ಬೆನಕರಾಜ ಎಂದು ತಿಳಿಸಿದ್ದು ನಂತರ ಅಲ್ಲಿಂದ ಠಾಣೆಗೆ ಚಾಸಾ 3 ರವರ ಮುಖಾಂತರ ದೂರು ಕಳಿಸಿಕೊಟ್ಟಿರುತ್ತಾರೆ. ಚೀಲವನ್ನು ತೆರೆದು ನೋಡಲಾಗಿ 90 ಎಂ.ಎಲ್. ನ ಒರಿಜಿನಲ್ ಚಾಯ್ಸ್ 32 ಟೆಟ್ರಾ ಪ್ಯಾಕ್ ಗಳು ದೊರಕಿದ್ದು ಅವುಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಮೊಹರು ಮಾಡಿ ಸಂಜೆ 6.30 ರಿಂದ 7 ರವರೆಗೆ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆರೋಪಿ ಮತ್ತು ಮಾಲಿನೊಂದಿಗೆ ಠಾಣೆಗೆ ಹಿಂದಿರುಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿತು. ನಿಪಿ 2 ಮತ್ತು 3 ಮತ್ತು 5 ರ ಬಗ್ಗೆ ಮಾಹಿತಿ ಇದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .